ದಿನಾಂಕ:18-11-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎನ್ ಸಿ ವಕೀಲರಿಂದಃ

15. ಸರ್ವೆ ನಂ.50, ಸರ್ವೆ ನಂ.50/4 ಆಗಿದೆ ಎಂದು ತೋರಿಸಲು ಯಾವ ದಾಖಲೆಯನ್ನು ಹಾಜರು ಮಾಡಿದ್ದಿರಾ ಎಂದರೆ ಉತಾರನ್ನು ಹಾಜರು ಮಾಡಿದ್ದೇನೆ. ಅದನ್ನು ಹೊರತು ಪಡಿಸಿ ಬೇರೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಸರ್ವೆ ನಂಬರ ಬದಲಾವಣೆ ಆಗಬೇಕಾದರೆ ಮ್ಯೂಟೆಷನ ಆದೇಶವಾಗುತ್ತದೆ ಅದನ್ನು ನೋಡಿದ್ದಿರಾ ಎಂದರೆ ನೋಡಿರುವುದಿಲ್ಲ. ದಿಃ4/6/2020 ರಂದು ಕೋವಿಡ್ ಇದ್ದು ನೊಂದಣಾಧಿಕಾರಿಗಳ ಕಚೇರಿ ಅರ್ಧ ದಿನ ಮಾತ್ರ ಕೆಲಸ ಮಾಡಿರುತ್ತದೆ, ಆದ್ದರಿಂದ ಮಾರನೇ ದಿನ ದಾಖಲೆಯನ್ನು ನೊಂದಣಿಗಾಗಿ ಹಾಜರು ಮಾಡಿದ್ದೇವೆ ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ.

16. ದಿಃ4/6/2020 ರಂದು ಸರ್ವೆ ನಂ.50 ರ ಜಮೀನು 19 ಎಕರೆ ಇದ್ದು, ಅದರಲ್ಲಿ ಪೂಜೇರಿ, ಕಲ್ಲೊಳ್ಳಿ ಮತ್ತು ವಡೇರ ರವರ ಹೆಸರುಗಳು ಜಂಟಿಯಾಗಿ ಇದ್ದವು ಎಂದರೆ ಸರಿ. ಸದರಿಯವರಿಂದ ಸಹಮತಿ ಪತ್ರವನ್ನು ಬರೆದುಕೊಳ್ಳಲು ತೊಂದರೆ ಇತ್ತೇ ಎಂದರೆ ಇರಲಿಲ್ಲ. ಆದರೆ ಅವರ ಒಪ್ಪಿಗೆ ನೀಡಿರುತ್ತಾರೆ. ಸದರಿಯವರು ಒಪ್ಪಿಗೆ ನೀಡಿದ ಬಗ್ಗೆ ನನ್ನ ಬಾಯಿ ಹೇಳಿಕೆಯನ್ನು ಹೊರತು ಪಡಿಸಿ ಬೇರೆ ದಾಖಲೆ ಇಲ್ಲ ಎಂದರೆ ಸರಿ. ಪ್ರತಿವಾದಿ 1 ರಿಂದ 4 ಮತ್ತು ಮೃತ ಲಕ್ಷ್ಮಣ ರವರಿಗೆ 13 ಎಕರೆ ನೀರಾವರಿ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿಯವರು ತಮ್ಮ ಜಮೀನಿಗೆ ಘಟಪ್ರಭಾ ನದಿಯಿಂದ ಪೈಪಲೈನ ಅಳವಡಿಸಿ ನೀರಾವರಿ ಜಮೀನನ್ನಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಬಗ್ಗೆದಾಖಲೆಯನ್ನು ಹಾಜರು ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ. ಪ್ರತಿವಾದಿಗಳು ತಮ್ಮ 13 ಎಕರೆ ನೀರಾವರಿ ಜಮೀನಿನಲ್ಲಿ ಕಬ್ಬನ್ನು ಬೆಳೆದು ಕಾರ್ಖಾನೆಗೆ ಕಳುಹಿಸುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 4 ರವರು

ಆರ್ಥಿಕ ಸಂಕಷ್ಟದಿಂದ ಬಳಲುತ್ತಿದ್ದರು ಮತ್ತು ಯಾರ ಯಾರ ಬಳಿ ಸಾಲ ಮಾಡಿದ್ದರು ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ. ಪ್ರತಿವಾದಿಗಳು ತಮ್ಮ ಜಮೀನಿನಲ್ಲಿ ಏನನ್ನು ಬೆಳೆಯುತ್ತಿಲ್ಲ ಎಂದು ತೋರಿಸುವ ದಾಖಲೆಯನ್ನು ಹಾಜರು ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ. ಪ್ರತಿವಾದಿಗಳು ಆರ್ಥಿಕ ಸಂಕಷ್ಟದಲ್ಲಿ ಇದ್ದರು ಮತ್ತು ತಮ್ಮ ಜಮೀನು ಬೀಳು ಬಿಟ್ಟಿದೆ ಎಂದು ತೋರಿಸಲು ನನ್ನ ಬಾಯಿ ಹೇಳಿಕೆಯನ್ನು ಹೊರತು ಪಡಿಸಿ ಬೇರೆ ದಾಖಲೆ ಇರುವುದಿಲ್ಲ ಎಂದರೆ ಸರಿ. ಅವರೇ ಹೇಳಿರುತ್ತಾರೆ.

17. ಸರ್ವೆ ನಂ.50/4 ರ ಜಮೀನಿಗೆ ಸಂಬಂಧಿಸಿದಂತೆ 16 ರೂ ಲಕ್ಷಗಳಿಗೆ ವ್ಯಾಪಾರವಾಗಿದ್ದು, 15 ಲಕ್ಷ ರೂಗಳನ್ನು ಮುಂಗಡವಾಗಿ ನೀಡಿದ್ದೇನೆ ಮತ್ತು ಆ ಬಗ್ಗೆ ಮಾತುಕತೆಯಾಗಿದೆ ಎಂದು ದಾವೆಗೆ ಅನುಕೂಲವಾಗುವಂತೆ ಮತ್ತು ಪ್ರತಿವಾದಿಗಳ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಲೇವಾದೇವಿ ವ್ಯವಾಹರ ಮಾಡಲು ಯಾವುದೇ ಪರವಾನಿಗೆ ಇಲ್ಲದೆ ಇರುವುದರಿಂದ ಪ್ರತಿವಾದಿಗಳು ಪಡೆದ ಸಾಲದ ಭದ್ರತೆಗಾಗಿ ಬರೆದುಕೊಟ್ಟ ಪತ್ರವನ್ನು ನಾನು ಮನೆಗೆ ತೆಗೆದುಕೊಂಡು ಹೋಗಿ ಕ್ರಯದ ಕರಾರು ಪತ್ರವೆಂದು ಸೃಷ್ಟಿ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಎಂದಿಗೂ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯದ ವ್ಯವಹಾರ ಮಾಡಿರುವುದಿಲ್ಲ, ಆ ಬಗ್ಗೆ ಮಾತುಕತೆ ಆಗಿರುವುದಿಲ್ಲ, ಪ್ರತಿವಾದಿಗಳು ಪಡೆದ ಸಾಲದ ಹಣವನ್ನು ಈಗಾಗಲೇ ಮರುಪಾವತಿಸಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶ್ರೀಮತಿ ದೀಪಾ ಜಿ.)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ